ಲೋಕಸಭೆಯಲ್ಲಿ ಸುಳ್ಳಿನ ಅಬ್ಬರ ಕಂಡು ಲೋಹಿಯಾ ಕೇಳಿದರು: 'ಸುಳ್ಳನೊಬ್ಬ, 'ನಾನು ಸುಳ್ಳು ಹೇಳುತ್ತಿಲ್ಲ' ಎಂದು ಜೋರಾಗಿ ಕೂಗಿಕೊಂಡರೆ ಸುಳ್ಳು ಸತ್ಯವಾಗುತ್ತದೆಯೆ?'

ಸ್ಪೀಕರ್ ಜೊತೆಗೂ ಲೋಹಿಯಾ ವಾಗ್ವಾದ ನಡೆಯುತ್ತಿತ್ತು.

ಒಮ್ಮೆ ಸ್ಪೀಕರ್ ಸರ್ದಾರ್ ಹುಕುಂ ಸಿಂಗ್‌ಗೆ ಲೋಹಿಯಾ ಹೇಳಿದರು: 'ಮಾನ್ಯ ಸಭಾಧ್ಯಕ್ಷರೆ, ನನ್ನ ಜೀವನದಲ್ಲಿ ಒಬ್ಬ ವ್ಯಕ್ತಿಗೆ (ಗಾಂಧೀಜಿಗೆ) ವಿಧೇಯವಾಗಿದ್ದನ್ನು ಬಿಟ್ಟರೆ ನಿಮಗೆ ಮಾತ್ರ ನಾನು ಇಷ್ಟು ವಿಧೇಯವಾಗಿರುವುದು.'

ಹುಕುಂ ಸಿಂಗ್: ನಾನೂ ಅಷ್ಟೆ, ನಿಮಗೆ ಕೊಟ್ಟಷ್ಟು ಗೌರವವನ್ನು ಬಹಳ ಜನರಿಗೆ ಕೊಟ್ಟಿಲ್ಲ.

ಮತ್ತೊಂದು ದಿನ ಸ್ಪೀಕರ್‌ಗೆ ಲೋಹಿಯಾ ಹೇಳಿದರು:

'ಸ್ವಾಮಿ! ನೀವು ಕೂತಿರುವ ಕುರ್ಚಿ ತಣ್ಣಗಿದೆ. ನಾನಾದರೋ ಕಾದ ಕುರ್ಚಿಯ ಮೇಲೆ ಕೂತಿದ್ದೇನೆ. ಈ ಬಿಸಿಯ ಮೂಲಕ ಇಡೀ ದೇಶದಲ್ಲಿ ಶಕ್ತಿ ಹಬ್ಬಿಸಬೇಕಾಗಿದೆ... ಆದರೆ ನೀವು ಸಂವಿಧಾನದ ಗಡಿಗಳನ್ನು ಸಂಕುಚಿತಗೊಳಿಸಬೇಡಿ; ನೀವು ಸಂವಿಧಾನದ ಸಾಧ್ಯತೆಗಳನ್ನು ವಿಸ್ತರಿಸಲು ಪ್ರಯತ್ನಿಸುತ್ತಿರಬೇಕು.'

ಪತ್ರಿಕಾ ಸಂದರ್ಶನವೊಂದರಲ್ಲಿ ಲೋಕಸಭೆಯ ಕಾರ್ಯವೈಖರಿ ಕುರಿತು ಲೋಹಿಯಾ ಹೇಳಿದರು:

'...ಚರ್ಚೆಗಳು ನಡೆಯುತ್ತಿರುತ್ತವೆ. ಆದರೆ ಪರಸ್ಪರ ದೂಷಣೆಯಲ್ಲೇ ಎಲ್ಲ ವಿಷಯಗಳೂ ಕೊನೆಗೊಳ್ಳುತ್ತವೆ. 'ವಾಹ್! ಎಷ್ಟು ಚೆನ್ನಾಗಿ ಎದುರಾಳಿಯನ್ನು ಮಣ್ಣು ಮುಕ್ಕಿಸಿದ!' ಎಂದು ಜನ ಹಾಗೂ ಸದನದ ಸದಸ್ಯರು ಪ್ರಶಂಸೆಯ ಸುರಿಮಳೆಗೈಯುತ್ತಾರೆ. ಆದರೆ ಆ 'ಮಣ್ಣು ಮುಕ್ಕಿಸಿದ' ಎಂಬ ಧೋರಣೆಯಿಂದಾಗಿ ನಿಯಮ, ಸಿದ್ಧಾಂತ, ಕಾಯ್ದೆ ಕಾನೂನುಗಳು ಮುರಿದು ಬೀಳುತ್ತವೆ. ಇದಕ್ಕೇನು ಕಾರಣ? ಜನತೆ ಜಾಗೃತರಾಗಿಲ್ಲ. ದೇಶದ ಘನತೆಯ ಪ್ರತಿಪಾದನೆ ಜನತೆಯಿಂದಲೇ ಪ್ರಾರಂಭ ಆಗಬೇಕು. ಜನತೆಯ ದುರ್ನಡತೆ ಲೋಕಸಭೆಯಲ್ಲಿ ಪ್ರತಿಫಲಿಸುತ್ತದೆ.'

* * *

ಲೋಹಿಯಾರ ಲೋಕಸಭಾ ಚರ್ಚೆಗಳಲ್ಲಿ ಸೈಕಲ್ ರಿಕ್ಷಾ ತುಳಿಯುವವರನ್ನು ಕುರಿತು ಅವರು ಮಾಡಿದ ಸುದೀರ್ಘ ಭಾಷಣ ಸಮಾಜವಾದಿ ಚರ್ಚೆಗಳ ಮುಖ್ಯ ಮಾದರಿಯಾಗಿದೆ. ಮನುಷ್ಯರು ತುಳಿಯುವ ಸೈಕಲ್ ರಿಕ್ಷಾದಲ್ಲಿ ಕೂರಲು ಲೋಹಿಯಾ ಒಪ್ಪುತ್ತಿರಲಿಲ್ಲ. 'ಇದು ಏಷ್ಯಾದ ಬಡತನದ ಸಂಕೇತ' ಎನ್ನುತ್ತಿದ್ದ ಲೋಹಿಯಾ, ಲೋಕಸಭೆಯಲ್ಲಿ ಸೈಕಲ್ ರಿಕ್ಷಾದವರ ಕಷ್ಟದ ಕತೆ ಹೇಳುತ್ತಾ ಒಟ್ಟು ಭಾರತದ ಶ್ರಮಜೀವಿಗಳ ಕತೆಯನ್ನು ತೆರೆದಿಟ್ಟರು. ಈ ಭಾಷಣ ಲೋಹಿಯಾರೊಳಗಿದ್ದ ಸೂಕ್ಷ್ಮ ಕಾದಂಬರಿಕಾರನ ವಿವರಾನ್ವೇಷಕ ಕಣ್ಣು; ತತ್ವಜ್ಞಾನಿಯ ನೋಟ; ಮಹಾನ್ ಮುತ್ಸದ್ದಿಯ ಕಾಳಜಿ, ಅನುಕಂಪ, ಜವಾಬ್ದಾರಿ ಎಲ್ಲವನ್ನೂ ಮಂಡಿಸುತ್ತದೆ. 12 ಏಪ್ರಿಲ್ 1966ರಂದು ಅವರು ಲೋಕಸಭೆಯಲ್ಲಿ ಮಾಡಿದ ಭಾಷಣದ ಭಾಗಗಳು:

ಮಾನ್ಯ ಸಭಾಧ್ಯಕ್ಷರೆ,

'ನಿನ್ನೆ ನಾಲ್ಕು ಲಕ್ಷ ಜನಸಂಖ್ಯೆ ಇರುವ ನಗರವೊಂದರ ಕೌನ್ಸಿಲರ್ ನನಗೆ ಫೋನ್ ಮಾಡಿ 'ಈಗ ನಗರದಲ್ಲಿ 5898 ಸೈಕಲ್ ರಿಕ್ಷಾಗಳಿವೆ; 17910 ಮಂದಿ ಸೈಕಲ್ ರಿಕ್ಷಾ ತುಳಿಯುವ ಜನರಿದ್ದಾರೆ' ಎಂದು ಹೇಳಿದರು. ಇದು ಅಲಹಾಬಾದ್ ನಗರದ ಕತೆ... ಲಕ್ನೋದಲ್ಲಿ ಸೈಕಲ್ ರಿಕ್ಷಾ ತುಳಿಯುವವರ ಸಂಖ್ಯೆ ಸ್ವಾತಂತ್ರ್ಯಪೂರ್ವಕ್ಕಿಂತ 9–10 ಪಟ್ಟು ಹೆಚ್ಚಿದೆ...

'ಒಂದು ಕಾಲಕ್ಕೆ ಕುದುರೆಗಾಡಿಗಳಿದ್ದವು. ಅದರಲ್ಲಿ ಟಾಂಗಾವಾಲಾ ಇರುತ್ತಿದ್ದ... ಸ್ವತಂತ್ರ ಭಾರತದ ಈ ದೃಶ್ಯವನ್ನು ನಿಮ್ಮ ಕಣ್ಣ ಮುಂದೆ ತಂದುಕೊಳ್ಳಿ: ಅರೆ ಮಾನವ–ಅರೆ ಕುದುರೆಯ ಸೈಕಲ್ ರಿಕ್ಷಾ ಉದ್ಯೋಗ ಹಿಡಿದಿರುವವರ ಸಂಖ್ಯೆ ಹತ್ತುಪಟ್ಟು ಹೆಚ್ಚಾಗಿದೆ... ಕುದುರೆಗಳಿಗೆ ಆಹಾರ ಒದಗಿಸುವ ಕಷ್ಟದಿಂದ ತಪ್ಪಿಸಿಕೊಳ್ಳಲು ಅವರು ಅರೆ ಕುದುರೆಯಾದರು. ಇದೇ ರೀತಿಯಲ್ಲಿ ಸಂಖ್ಯೆ ಹೆಚ್ಚಾಗಿರುವ ಮತ್ತೊಂದು ವೃತ್ತಿಯೆಂದರೆ ವೇಶ್ಯಾವಾಟಿಕೆ. ಈ ಎರಡೂ ವೃತ್ತಿಗಳಲ್ಲಿ ಗಣನೀಯ ಏರಿಕೆಯಾಗಿದೆ...'

'ನನ್ನ ಅಂದಾಜಿನ ಪ್ರಕಾರ ದೇಶದಲ್ಲಿ ಈಗ ಮೂವತ್ತು ಲಕ್ಷ ಸೈಕಲ್ ರಿಕ್ಷಾ ತುಳಿಯುವವರಿದ್ದಾರೆ; ಅಂದರೆ, ಜನಸಂಖ್ಯೆಯ ಶೇಕಡ ಒಂದರಷ್ಟು ಮಂದಿ... ಹಸಿವು ಅವರನ್ನು ಈ ವೃತ್ತಿಗೆ ದೂಡಿದೆ. ಕೃಷಿ ಕೆಲಸಗಳಿಂದ ಬರುವ ಆದಾಯ ಸೈಕಲ್ ರಿಕ್ಷಾ ತುಳಿಯುವವನ ಆದಾಯಕ್ಕಿಂತ ಕಡಿಮೆ. ರಿಕ್ಷಾ ತುಳಿಯುವವನು ತನ್ನ ಆದಾಯದ ಒಂದು ಭಾಗವನ್ನು ರಿಕ್ಷಾ ಮಾಲೀಕರಿಗೂ, ಪೊಲೀಸರಿಗೂ ಕೊಟ್ಟ ಮೇಲೆ ಅವನಿಗೆ ದಿನಕ್ಕೆ ಐದಾರು ರೂಪಾಯಿ ಉಳಿಯುತ್ತದೆ. ಹಸಿವಿನ ಜೊತೆಗೆ ಆಧುನಿಕ ಬದುಕಿನ ಆಕರ್ಷಣೆ ಕೂಡ ಬಡವರನ್ನು ಈ ವೃತ್ತಿಗೆ ಬರುವಂತೆ ಮಾಡಿದೆ.

'ಕಳೆದ ಹದಿನೆಂಟು ವರ್ಷಗಳಲ್ಲಿ ದೇಶ ಆಧುನಿಕತೆಯತ್ತ ಮುನ್ನಡೆಯುತ್ತಿದೆ. ವಿಶೇಷವಾಗಿ ನಮ್ಮ ಯುವ ಜನಾಂಗ ಜಾತಿಪದ್ಧತಿಯ ಬಗ್ಗೆ ರೋಸಿ ಹೋಗಿರುವುದರಿಂದ ಹಳ್ಳಿಗಳಲ್ಲಿ ಇರಲು ಇಷ್ಟಪಡುತ್ತಿಲ್ಲ. ನಾನು ಚಮ್ಮಾರನೋ ಭಂಗಿಯೋ ಆಗಿದ್ದರೆ ಹಳ್ಳಿಗೆ ಹೋಗಲು ಇಷ್ಟಪಡುವುದಿಲ್ಲ; ಯಾಕೆಂದರೆ ಎಲ್ಲರ ಕಣ್ಣೂ ನನ್ನ ಚಟುವಟಿಕೆಗಳ ಮೇಲೇ ನೆಟ್ಟಿರುತ್ತದೆ. ಮೇಲುಜಾತಿಯ ವ್ಯಕ್ತಿ ಕೂಡ ಹಳ್ಳಿಯ ಈ ಬೇಹುಗಾರ ಕಣ್ಣಿನಿಂದ ತಪ್ಪಿಸಿಕೊಳ್ಳಲಾರ.

'ಮೇಲುಜಾತಿಯವರ ಚಿತ್ರಹಿಂಸೆಗೆ ಹೆದರಿದ ಬಡವರು, ನಿರುದ್ಯೋಗಿಗಳು ನಗರಕ್ಕೆ ಬಂದು ಸೈಕಲ್ ರಿಕ್ಷಾ ಓಡಿಸುತ್ತಾರೆ. ಗೆಳೆಯರಿಲ್ಲದ, ಉಳಿಯಲು ಜಾಗವಿಲ್ಲದ, ನಗರಗಳಲ್ಲಿ ಬದುಕುವ ಈ ಜನ ರಾತ್ರಿ ಸರೊತ್ತಿನ ತನಕವೂ ಕೆಲಸ ಮಾಡಬೇಕಾಗುತ್ತದೆ. ಪೊಲೀಸರು ಇವರನ್ನು 109ನೇ ಸೆಕ್ಷನ್ ಅಡಿ ಬಂಧಿಸಿ ಯಾವ ವಿಚಾರಣೆಯೂ ಇಲ್ಲದೆ ಜೈಲಿಗೆ ದೂಡುತ್ತಾರೆ... ಸರ್ಕಾರ 109ನೇ ಸೆಕ್ಷನ್ ರದ್ದು ಮಾಡುವ ತನಕ ಪೊಲೀಸರು ಈ ಬಡ ಸೈಕಲ್ ರಿಕ್ಷಾದವರಿಗೆ ಕಿರುಕುಳ ಕೊಡುತ್ತಲೇ ಇರುತ್ತಾರೆ.'

'ಹಳ್ಳಿ ಒಂದು ಸೆರೆಮನೆಯಾಗಿಬಿಟ್ಟಿದೆ. ಈ ಸೆರೆಮನೆಯಿಂದ ತಪ್ಪಿಸಿಕೊಂಡು ನಗರದ ರಂಗುರಂಗಿನ ಬದುಕನ್ನು ಅನುಭವಿಸುವ ಕಾತರ ಹೆಚ್ಚುತ್ತಿದೆ. ಹವಾನಿಯಂತ್ರಿತ ಕಾರು, ಹವಾನಿಯಂತ್ರಿತ ಕೊಠಡಿಗಳು ಶ್ರೀಮಂತರ ಆಧುನಿಕ ಅಂತಸ್ತಿನ ಸಂಕೇತವಾಗಿರುವಂತೆಯೇ, ಕೃಷಿ ಕಾರ್ಮಿಕರಿಗೆ ಹಾಗೂ ದಮನಿತ ವರ್ಗದವರಿಗೆ ಸೈಕಲ್ ರಿಕ್ಷಾ ಆಧುನಿಕ ಅಂತಸ್ತಿನ ಸಂಕೇತವಾಗಿದೆ. ಇದು ಹಳ್ಳಿಯ ಬದುಕಿನಿಂದ, ಜಾತಿಪದ್ಧತಿ ಹಾಗೂ ಹಸಿವಿನಿಂದ ತಪ್ಪಿಸಿಕೊಳ್ಳುವ ಮಾರ್ಗವಾಗಿದೆ. ಅವರ ಬದುಕು ಅರೆಮಾನವ ಸ್ಥಿತಿಯಲ್ಲಿದ್ದರೂ ಅದು ಅವರಿಗೆ ಹೊಸ ಬದುಕಾಗಿದೆ... ಹೀಗಾಗಿ ಈ ದೇಶ ಯಾವ ದುಸ್ಥಿತಿ ತಲುಪಿದೆಯೆಂದರೆ, ಈ ನವ ಜಗತ್ತಿನ ನಾಯಕ ಅರೆಮಾನವ–ಅರೆಪ್ರಾಣಿ ಆಗಿದ್ದಾನೆ.

'ಮಂತ್ರಿಗಳು 'ಸೈಕಲ್ ರಿಕ್ಷಾ ತುಳಿಯುವುದು ಚಾಲಕನ ಆರೋಗ್ಯದ ಮೇಲೆ ಪರಿಣಾಮ ಬೀರುವುದಿಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ನಾನು ಶ್ರೀ ಶಾಹ್ನವಾಝ್ ಖಾನ್ ಹಾಗೂ ಅವರ ಹಿರಿಯ ಸಚಿವ ಶ್ರೀ ಜಗಜೀವನ್ ರಾಮ್ ಇಬ್ಬರೂ ಅಮೆರಿಕ ಅಳವಡಿಸಿಕೊಂಡಿರುವ ಮಾರ್ಗವನ್ನು ಅನುಸರಿಸಬೇಕು ಎಂದು ಹೇಳುತ್ತೇನೆ. ಅಮೆರಿಕದಲ್ಲಿ ನ್ಯಾಯಾಧೀಶರು ಸೆರೆಮನೆಗೆ ಭೇಟಿ ಕೊಟ್ಟು ಅಲ್ಲಿನ ಸ್ಥಿತಿಗತಿಗಳನ್ನು ಅರಿಯುತ್ತಾರೆ. ಅದೇ ರೀತಿ ಈ ಇಬ್ಬರೂ ಒಂದು ತಿಂಗಳು ಸೈಕಲ್ ರಿಕ್ಷಾ ತುಳಿದು, ಅದು ಆರೋಗ್ಯದ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂಬುದನ್ನು ತಿಳಿದುಕೊಳ್ಳಲಿ ಎಂಬುದು ನನ್ನ ಸಲಹೆ. ಡಾಕ್ಟರುಗಳಿಂದ ನಾನು ತಿಳಿದಿರುವ ಪ್ರಕಾರ, ಸೈಕಲ್ ರಿಕ್ಷಾ ತುಳಿಯುವವರು ಹದಿನೈದು–ಇಪ್ಪತ್ತು ವರ್ಷ ವಯಸ್ಸಿನವರಿರಲಿ, ನಲವತ್ತು ವರ್ಷ ಮೀರಿರಲಿ, ಅವರ ಶ್ವಾಸಕೋಶಗಳಿಗೆ ಹಾನಿಯಾಗುತ್ತದೆ. ಎರಡುಮೂರು ವರ್ಷಗಳಲ್ಲಿ ಚಾಲಕ ಸಾವನ್ನಪ್ಪಬೇಕಾಗುತ್ತದೆ ಅಥವಾ ಗಂಭೀರ ಕಾಯಿಲೆಗೆ ತುತ್ತಾಗಬೇಕಾಗುತ್ತದೆ.

'ಜೊತೆಗೆ, ಈ ಕಾಲದಲ್ಲಿ ಆಗಾಗ್ಗೆ ಗೋಲಿಬಾರ್ ನಡೆಯುತ್ತಿರುತ್ತದೆ; ಆಗ ಬಲಿಯಾಗುವವನು ರಿಕ್ಷಾ ತುಳಿಯುವವನು; ಕಾರಣ, ಅವನು ರಿಕ್ಷಾ ತುಳಿಯುತ್ತಾ ಇಡೀ ನಗರವನ್ನು ಸುತ್ತುತ್ತಿರಬೇಕಾಗುತ್ತದೆ. ಕೆಲವೊಮ್ಮೆ ಬಾಂಬೆ, ಕಲ್ಕತ್ತಾ, ಅಲಹಾಬಾದ್ ನಗರಗಳಲ್ಲಿ ಬಂದ್‌ಗಳು ನಡೆಯುತ್ತಿರುತ್ತವೆ. ತಿಳಿದೋ, ತಿಳಿಯದೆಯೋ ರಿಕ್ಷಾ ತುಳಿಯುವವರು ಈ ಬಂದ್‌ಗಳಲ್ಲಿ ಸೇರಿಕೊಳ್ಳುತ್ತಾರೆ. ಸೈಕಲ್ ರಿಕ್ಷಾದವರು ಕ್ರಾಂತಿಕಾರಿಗಳಾಗಿದ್ದಾರೆ ಎಂದು ಇದರ ಅರ್ಥವಲ್ಲ. ಆದರೆ ಕೆಲವೊಮ್ಮೆ ಸೈಕಲ್ ರಿಕ್ಷಾವಾಲಾ ಇಷ್ಟವಿರದಿದ್ದರೂ ಕ್ರಾಂತಿಕಾರಿಯಾಗುತ್ತಾನೆ; ಕ್ರಾಂತಿಯ ಮುಂದಾಳಾಗುತ್ತಾನೆ.

'ಕಳೆದ ಏಳೆಂಟು ವರ್ಷಗಳಿಂದ ನನಗೆ ಪರಿಚಯವಿರುವ ಶ್ರೀ ಚಂದನ್, ರಿಕ್ಷಾ ತುಳಿಯುತ್ತಲೇ ಫ್ಲೀಡರ್ ಹುದ್ದೆ ತಲುಪಿದ ಕತೆ ಹೇಳುತ್ತೇನೆ. ಇದೇನೂ ದೊಡ್ಡ ಸಾಮಾಜಿಕ